## ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ

**ಸಿ.ಸಿ ಃ 1/2022**

**ಸಾಕ್ಷಿದಾರರ ಹೆಸರು ಃ ಭರಮಪ್ಪ ಬೆಳಗಲಿ**

**ಸಿ.ಡಬ್ಲ್ಯೂ - 15**

**ತಂದೆಯ ಹೆಸರು ಃ ಮನೋಹರ್**

**ಪಿ.ಡಬ್ಲ್ಯೂ - 09**

**ವಯಸ್ಸು ಃ 29 ವರ್ಷ**

**ಉದ್ಯೋಗ ಃ ಪಿ ಎಸ್ ಐ ಶೃಂಗೇರಿ ಪೊಲೀಸ್ ಠಾಣೆ**

**ವಾಸಸ್ಥಳ ಃ ಶೃಂಗೇರಿ**

**ದಿನಾಂಕಃ 27.09.2023 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಃಃ ಮುಖ್ಯ ವಿಚಾರಣೆ ಃ ಮಾನ್ಯ ಃ ಎಪಿಪಿಯವರಿಂದ ಃಃ**

06/10/2022 ರಿಂದ ಈ ತನಕ ನಾನು ಶೃಂಗೇರಿ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 16/07/2022 ರಂದು ಮೇಲಾಧಿಕಾರಿಗಳ ಆದೇಶದಂತೆ ಪ್ರಕರಣದ ಮುಂದುವರೆದ ತನಿಖೆಯನ್ನುಕೈಗೊಂಡಿರುತ್ತೇನೆ. ದಿನಾಂಕಃ 15.08.2022 ರಂದು ಕೃತ್ಯದಲ್ಲಿ ಬಳಸಲಾಗಿದೆ ಎನ್ನಲಾದ ಜೆ ಸಿ ಬಿಗಳ ಪತ್ತೆಗಾಗಿ ನಮ್ಮ ಠಾಣೆಯ ಸಿಬ್ಬಂದಿಗಳಾದ ಪ್ರವೀಣ್ ಮತ್ತು ಗಿರೀಶ್ ಎನ್ನುವವರನ್ನು ನೇಮಕ ಮಾಡಿದ್ದು, ದಿನಾಂಕಃ 15.08.2022 ಹಾಗೂ 16.08.2022 ರಂದು ಅವರಿಂದ ವರದಿ ಪಡೆದಿರುತ್ತೇನೆ. ನಂತರ ದಿನಾಂಕಃ 17.08.2022 ರಂದು ಪ್ರಸ್ತುತ ಶೃಂಗೇರಿ ತಹಶೀಲ್ದಾರ್ ರವರಿಗೆ ಈ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕೋರಿ ಮನವಿ ಸಲ್ಲಿಸಿರುತ್ತೇನೆ.

ತನಿಖೆಯನ್ನು ಮುಂದುವರೆಸಿ ದಿನಾಂಕಃ 18.09.2022 ರಂದು ಶೃಂಗೇರಿ ಪ್ರಸ್ತುತ ತಹಶೀಲ್ದಾರ್ ರವರು ನೀಡಿದ ದಾಖಲೆಗಳನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕಃ 16.10.2022 ರಂದು ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸಾ-11 ರಿಂದ 14 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ದಿನಾಂಕಃ 20.10.2022 ರಂದು ಆರೋಪಿಗೆ 91 ಸಿ ಆರ್ ಪಿ ಸಿ ಮೂಲಕ ದಾಖಲೆಯನ್ನು ಕೋರಿ ತಿಳುವಳಿಕೆ ನೀಡಿರುತ್ತೇನೆ. ದಿನಾಂಕಃ 22.10.2022 ರಂದು ಆರೋಪಿ

ನೀಡಿದ ದಾಖಲೆಗಳನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ದಿನಾಂಕಃ 26.10.2022 ರಂದು ಹೆಚ್ಚುವರಿ ದೋಷಾರೋಪಣ ಪತ್ರವನ್ನು ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ.

ಸಾಕ್ಷಿ ದಿನಾಂಕಃ 15.08.2022 ಹಾಗೂ 16.08.2022 ರಂದು ಪಡೆದ ಎರಡು ವರದಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-17 ಮತ್ತು 18 ಹಾಗೂ ಅದರಲ್ಲಿರುವ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಗಳನ್ನು ನಿಪಿ-17(ಎ) ಮತ್ತು 18(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿನಾಂಕಃ 17.08.2022 ರಂದು ಪ್ರಸ್ತುತ ಶೃಂಗೇರಿ ತಹಶೀಲ್ದಾರ್ ರವರಿಗೆ ಈ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕೋರಿ ಸಲ್ಲಿಸಿದ ಮನವಿಯನ್ನು ನೋಡಿ ಗುರುತಿಸಿದ್ದು ಸದರಿ ಮನವಿ ಜೆರಾಕ್ಸ್ ಪ್ರತಿಯಾದ ಕಾರಣ ನಿಶಾನೆಯಾಗಿ ಗುರುತಿಸಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

**(ದಿನಾಂಕಃ 27.09.2023 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಪ್ರ.ದ.ನ್ಯಾ.ದಂಃ ಶೃಂಗೇರಿ**

**ಸಾಕ್ಷಿ ಸಹಿಃ**